**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 671 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.09.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಮನಗರ ಅರ್ಚಕರಹಳ್ಳಿಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಸರ್ಕಾರ ಮಂಜೂರು ಮಾಡಿರುವ ಜಮೀನು ಎಷ್ಟು; | ಸರ್ಕಾರದ ಆದೇಶ ಸಂಖ್ಯೆ: ಆಕುಕ 196 ಎಂಪಿಎಸ್ 2006 (ಭಾ) ದಿನಾಂಕ: 18.08.2007 ರಂತೆ ರಾಮನಗರದ ಅರ್ಚಕರಹಳ್ಳಿಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಆರೋಗ್ಯ ನಗರ ಸ್ಥಾಪನೆಗಾಗಿ ಸರ್ಕಾರವು 216 ಎಕರೆ 24 ಗುಂಟೆ ಜಮೀನಿನ ಪೈಕಿ 71 ಎಕರೆ 15 ಗುಂಟೆ ಜಮೀನನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಹಾಗೂ ಉಳಿದ 145 ಎಕರೆ 09 ಗುಂಟೆ ಜಮೀನನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಹಸ್ತಾಂತರಿಸಿ, ಆದೇಶಿಸಿದೆ. |
| ಆ) | ವೈದ್ಯಕೀಯ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಕಾಮಗಾರಿಗೆ ಯಾವಾಗ ಮಂಜೂರಾತಿ ನೀಡಿದೆ; ಮಂಜೂರಾತಿ ನೀಡಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಕಾಮಗಾರಿ ಪ್ರಾರಂಭಗೊಂಡಿದ್ದಲ್ಲಿ ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ? (ಮಾಹಿತಿ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಆಕುಕ 117 ಎಂಪಿಎಸ್ 2007 (ಭಾಗ-2) ದಿನಾಂಕ: 14.05.2007 ರನ್ವಯ ರಾಮನಗರ ತಾಲ್ಲೂಕು, ಅರ್ಚಕರಹಳ್ಳಿ ಗ್ರಾಮದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಇತರೆ ಪೂರಕ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಆಕುಕ 425 ಆರ್‌ಜಿಯು 2015, ದಿ: 17.05.2016ರ ಆದೇಶದಲ್ಲಿ ಆರ್‌ಜಿಯುಹೆಚ್‌ಎಸ್ ಕ್ಯಾಂಪಸ್ ಮತ್ತು ಇತರೆ ಪೂರಕ ಕಟ್ಟಡಗಳ ನಿರ್ಮಾಣ ಕಾಮಗಾರಿಯ ರೂ. 580.00 ಕೋಟಿಗಳ ಪರಿಷ್ಕೃತ ಸವಿವರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.<br><br>ಆದರೆ, ಭೂಪರಿಹಾರಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ವ್ಯಾಜ್ಯವಿಲ್ಲದ ನಿವೇಶನಗಳನ್ನು ಒದಗಿಸಲು ಸಾಧ್ಯವಾಗದಿರುವುದನ್ನು ಸರ್ಕಾರವು ಗಮನಿಸಿ, ಈ ನಿಟ್ಟಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 14.01.2019ರಂದು ಜರುಗಿದ ಸಭೆಯಲ್ಲಿ ಕಳೆದ 11 ವರ್ಷಗಳಿಂದ ಭೂ ಸ್ವಾಧೀನ ಪ್ರಕರಣಗಳು ಬಾಕಿ ಇದ್ದು, ಕಾಮಗಾರಿಗಳನ್ನು ಇದುವರೆವಿಗೆ ಪ್ರಾರಂಭಿಸದೆ ಇರುವುದು ಗುತ್ತಿಗೆದಾರರೊಂದಿಗೆ ಮತ್ತೊಂದು ಸುತ್ತಿನ ವ್ಯಾಜ್ಯಕ್ಕೆ |

| | | |
|---|---|---|
| | | ಅವಕಾಶಕೊಟ್ಟಂತಾಗುತ್ತದೆ. ಆದ್ದರಿಂದ, ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಿ, ಭೂಸ್ವಾಧೀನ ಹಾಗೂ ಇತರೆ ನ್ಯಾಯಾಲಯದ ಪ್ರಕರಣಗಳು ಇತ್ಯರ್ಥವಾದ ನಂತರ ಕ್ರಮವಹಿಸಲು ಶಿಫಾರಸ್ಸು ಮಾಡಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 15 ಆರ್‌ಜಿಯು 2019, ದಿನಾಂಕ: 28.02.2019 ರಲ್ಲಿ ಈ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಾದ ಮೆ\|\| ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಇವರೊಂದಿಗೆ ಪಿಡಬ್ಲ್ಯೂಡಿ-65 ರನ್ವಯ ಈ ಹಿಂದೆ ಅಂದರೆ ದಿನಾಂಕ: 25.06.2007 ರಂದು ಮಾಡಿಕೊಂಡಿದ್ದ ಗುತ್ತಿಗೆ ಕರಾರನ್ನು ರದ್ದು ಪಡಿಸಿ, ದಿನಾಂಕ: 24.08.2007ರಂದು ಹೊರಡಿಸಿದ letter of acceptance ನಂತೆ ಗುತ್ತಿಗೆದಾರರು ಒದಗಿಸಿದ ಬ್ಯಾಂಕ್ ಗ್ಯಾರಂಟಿಯನ್ನು ಹಿಂದಿರುಗಿಸಲು ಸಹ ಆದೇಶಿಸಿದೆ.<br><br>2022-23ನೇ ಸಾಲಿನ ಆಯವ್ಯಯದ ಕಂಡಿಕೆ 128 ರಲ್ಲಿ " ಹಲವಾರು ವರ್ಷಗಳ ಹಿಂದೆ ಘೋಷಣೆಯಾದರೂ ನೆನೆಗುದಿಗೆ ಬಿದ್ದಿರುವ ರಾಮನಗರದ ಅರ್ಚಕರಹಳ್ಳಿ ಗ್ರಾಮದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್‌ನ್ನು ನಮ್ಮ ಸರ್ಕಾರವು ರೂ. 600 ಕೋಟಿ ವೆಚ್ಚದಲ್ಲಿ ನಿರ್ಮಿಸಲಿದೆ" ಎಂದು ಘೋಷಿಸಲಾಗಿದೆ.<br><br>ದಿನಾಂಕ: 07.06.2022ರಂದು ನಡೆದ RGUHSನ ಸಿಂಡಿಕೇಟ್ ಸಭೆಯಲ್ಲಿ ಈ ಕಾಮಗಾರಿಗೆ ರೂ. 600 ಕೋಟಿಗಳನ್ನು RGUHS ನ ಸ್ವಂತ ಸಂಪನ್ಮೂಲದಿಂದ ಭರಿಸಲು ಅನುಮೋದಿಸಿದ್ದು, ಅದರಂತೆ, ಈ ಪ್ರಸ್ತಾವನೆಗೆ ದಿನಾಂಕ: 24.08.2022ರಂದು ಆರ್ಥಿಕ ಇಲಾಖೆಯ ಸಹಮತಿ ಪಡೆಯಲಾಗಿದೆ. ಪ್ರಸ್ತುತದಲ್ಲಿ, ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುತ್ತಿದೆ. |

ಕಡತ ಸಂಖ್ಯೆ: ಎಂಇಡಿ 114 ಆರ್‌ಜಿಯು 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು